*LAC.A No : 446/22*
*PW-01*

**Witness duly sworn on 01.02.2023**

***Cross examination by D.G.P for Respondent :***

ನಾನು ಸಿಂಧುವಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ಜಮೀನು ಸ.ನಂ 110/1 ರಲ್ಲಿ 15 ಗುಂಟೆ ಜಮೀನು ಭೂ ಸ್ವಾಧೀನ ಆಗಿದೆ. ಭೂ ಸ್ವಾಧೀನ ಪಡಿಸಿಕೊಂಡ ದಿನಾಂಕ ಗೊತ್ತಿಲ್ಲ. ಕೆಳ ನ್ಯಾಯಾಲಯ ಆದೇಶದಂತೆ ನಾನು ಪರಿಹಾರ ಹಣವನ್ನು ಪಡೆದಿದ್ದೇನೆ ಎಂದರೆ ಸರಿ. ನಾನು ಈಗಾಗಲೇ ಪರಿಹಾರ ಹಣವನ್ನು ಪಡೆದ ಕಾರಣ ಹೆಚ್ಚುವರಿ ಪರಿಹಾರ ಹಣ ಪಡೆಯಲು ಅರ್ಹ ಇಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನ ಮಹದೇವಯ್ಯ ಅವರಿಗೆ ಹೆಚ್ಚಿನ ಪರಿಹಾರ ಬಂದ ಕಾರಣ ನಾನು ಈ ಅಪೀಲನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಕಾರಣ ಹೊರತಾಗಿ ಬೇರೆ ಕಾರಣ ಇಲ್ಲ. ಕೆಳ ನ್ಯಾಯಾಲಯದಲ್ಲಿ ನಾನು ಪ್ರಕರಣದಲ್ಲಿ ಹಾಜರು ಆಗಿದ್ದೇನೆ ಎಂದರೆ ಸರಿ.5094 ದಿನಗಳ ಕಾಲ ವಿಳಂಬ ಮನ್ನಿಸುವ ಬಗ್ಗೆ ನಾನು ಸೂಕ್ತ ಕಾರಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ನಾನು ಹೇಳಿದಂತೆ ನನಗೆ ಅನಾರೋಗ್ಯ ಇದ್ದ ಬಗ್ಗೆ ನಾನು ಸೂಕ್ತ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಹೇಳಿದಂತೆ ನನಗೆ ಹಣಕಾಸು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಹಣಕಾಸು ತೊಂದರೆ ಇದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ನಿಗದಿತ ನ್ಯಾಯಾಲಯ ಶುಲ್ಕ ಕಟ್ಟಿಲ್ಲ ಎಂದರೆ ಸರಿಯಲ್ಲ. ಮಹದೇವಯ್ಯ ಅವರಿಗೆ ಸೇರಿದ ಜಮೀನು ಭೂ ಸ್ವಾಧೀನ ಆದ ಬಗ್ಗೆ ಮತ್ತು ಹೆಚ್ಚುವರಿ ಪರಿಹಾರ ನೀಡಿದ ಬಗ್ಗೆ ನನಗೆ ಪೂರ್ಣ ಮಾಹಿತಿ ಇಲ್ಲ. ಹೆಚ್ಚಿನ ಪರಿಹಾರ ಸಲುವಾಗಿ ಸುಳ್ಳು ಅಂಶಗಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಲ ವಿಳಂಬ ಮನ್ನಿಸುವ ಬಗ್ಗೆ ನಾನು ಸೂಕ್ತ ಕಾರಣ ತಿಳಿಸಿಲ್ಲ ಮತ್ತು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

TYPED TO MY DICTATION IN THE OPEN COURT.

***R. O. I. & A. C.,***

***IV ADJ & MACT.,***
***MYSORE.***